UNIVERSITY LIBRARY
Newspaper's Agri Clippings
For more information visit
University Library Website
Web - uasbagrilibindia.org
E-mail- librarian@uasbangalore.edu.in
09-07-2026
Thursday

Whitefly menace in coconut, nut shedding in arecanut likely to go up

If rain continues to play truant, two major crops of the region — coconut and arecanut — will face the risk of low yield

Raviprasad Kamila
MANGALURU





(Left) An arecanut farm in Mangaluru; a paddy field being prepared for sowing. H.S. MANJUNATH

With coastal Karnataka recording 29% deficit rainfall, as per Karnataka State Natural Disaster Monitoring Centre (KSNDMC), despite rains picking up in early July, paddy cultivation in the region is yet to pick up.

If rain continues to play truant, two major crops of the region – coconut and arecanut – will face the risk of low yield.

K. Balachandra Hebbar, director at ICAR-Central Plantation Crops Research Institute (CPCRI), Kasaragod, Kerala, explained to *The Hindu* that deficit rainfall in the coastal region might result in an increase in whitefly menace at coconut plantations. When the temperature rises and moisture level reduces in coconut palms, whiteflies multiply, thus weakening the membrane.

On the other hand, coconut plantations in districts like Chikkamagaluru, Hassan, Tumakuru, Mandya, Bengaluru South and Mysuru are likely to witness an increase in the menace of black-headed caterpillars, Mr. Hebbar said.

When the temperature rises and moisture level reduces in coconut palms, whiteflies multiply, thus weakening the membrane

Impact on arecanut

'Kole roga' (fruit rot disease) in arecanut plantations is associated with constant heavy rainfall. Scanty rainfall might protect arecanut farms from the disease. But farmers will have to be prepared to face another risk.

"Deficit rainfall will result in increased nut shedding in arecanut plantations, thus hitting the production," said Mr. Hebbar. This will be another blow to many arecanut farmers whose farms have already been hit by yellow leaf disease (YLD) and leaf spot disease.

The director further said that CPCRI has already informed Karnataka Horticulture Department officials about the precautionary measures to be taken to face the diseases and pest threats in the plantations.

Paddy cultivation

Once rich in paddy cultivation, vast tracks of paddy fields in the coastal region have now come under commercial activities. Some of them remain uncultivated.

The Agriculture Department has set a target of 10,000 hectares of paddy sowing in Dakshina Kannada. Of this, only 686 hectares (6.86%) have been sowing, said Joint Director of Agriculture Honnappa Gowda.

With regard to the target of 37,000 hectares set in Udupi district, sowing has been completed on 10,300 hectares (27.84%), said G.C. Poornima, Joint Director of Agriculture.

In Uttara Kannada, the target set is 36,860 hectares. Sowing has been completed on 14,378 hectares (39%), said an official.

Human-wildlife conflict

Dinesh Holla, environmental activist and an avid trekker in the Western Ghats for the past three decades, said that with less rainfall, shola forests in the ghats will not hold water for the non-rainy season. Rivers and streams will dry even before winter, he added. "The human-wildlife conflict is likely to increase, with wild animals coming out in search of water and food to human habitations," he warned.

Hydel power production will be hit this year, he pointed out.

Hindu Pg.06

Maize Biggest Source of Ethanol in Petrol Blend

Our Bureau

Pune: Grain-based ethanol accounted for two-thirds of ethanol supplied for petrol blending until June, underscoring India's rapid shift away from sugarcane as the main feedstock as the country achieved 20% blending target five years ahead of the original schedule. Maize has emerged as the biggest source of ethanol for petrol blending at 36% of the total supplies, ahead of sugarcane's 33% share, according to the latest ethanol supply data released by All India Distillers' Association (AIDA).



To overcome the restrictions on year-round availability of ethanol from sugarcane – a water intensive crop, whose production declines in a drought year – the government amended the National Biofuel Policy in 2022 to include more feedstocks, including maize and rice. The latest data reveals the total ethanol supplied to oil marketing companies has reached 717 crore litres against contracted volumes of 1,048 crore litres, representing an overall supply achievement of 68% in the first eight months of the ongoing supply year.

Economic Times Pg.08

ಸಸಿಗಳ ದೀರ್ಘಕಾಲೀನ ಉಳಿವಿಗೆ ಆದ್ಯತೆ

ವೈಜ್ಞಾನಿಕ ನಿರ್ವಹಣೆ, ಪಾರದರ್ಶಕ ಮೇಲ್ವಿಚಾರಣೆ, ನಾಗರಿಕರ ಸಹಭಾಗಿತ್ವ: ಬಿಡಿಎ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಶಾಶ್ವತ ಹಸಿರು ಸಂಪತ್ತನ್ನು ನಿರ್ಮಿಸಲು ವೈಜ್ಞಾನಿಕ ನಿರ್ವಹಣೆ, ಪಾರದರ್ಶಕ ಮೇಲ್ವಿಚಾರಣೆ, ಅಗತ್ಯವಿರುವಲ್ಲಿ ಸಸಿಗಳ ಮರುನೆಡುವಿಕೆ, ಸಾರ್ವಜನಿಕರ ಪಾಲ್ಗೊಳ್ಳುವಿಕೆ ಹಾಗೂ ತಂತ್ರಜ್ಞಾನ ಆಧಾರಿತ ಮೇಲ್ವಿಚಾರಣೆಯಲ್ಲಿ 'ಹಸಿರು ಬೆಂಗಳೂರು' ಯೋಜನೆಯನ್ನು ಯಶಸ್ವಿಗೊಳಿಸಲು ಬದ್ಧವಾಗಿರುವುದಾಗಿ ಬಿಡಿಎ ಅಧಿಕಾರಿಗಳು ತಿಳಿಸಿದ್ದಾರೆ.

15 ಲಕ್ಷ ಸ್ಥಳೀಯ ಸಸಿಗಳ ಅಭಿಯಾನದ ಉದ್ದೇಶ ಕೇವಲ ಸಸಿಗಳನ್ನು ನೆಡುವುದಲ್ಲ. ಹಸಿರು ಸಂಪತ್ತನ್ನು ನಿರ್ಮಿಸುವುದಾಗಿದೆ. ಮೂರು ವರ್ಷಗಳ ಅಂತ್ಯಕ್ಕೆ ಶೇ 80ಕ್ಕಿಂತ ಹೆಚ್ಚು ಸಸಿಗಳ ಉಳಿವಿನ ಗುರಿ ಸಾಧಿಸುವ ವಿಶ್ವಾಸವನ್ನು ಅಧಿಕಾರಿಗಳು ಹೊಂದಿದ್ದಾರೆ.

ಈ ಅಭಿಯಾನವು ಬೆಂಗಳೂರಿನಲ್ಲಿ ಇದುವರೆಗೆ ಕೈಗೊಳ್ಳಲಾದ ಅತಿದೊಡ್ಡ ಹಸಿರು ಹೊದಿಕೆ ಕಾರ್ಯಕ್ರಮಗಳಲ್ಲಿ ಒಂದಾಗಿದೆ. ಮೂರು ಪ್ರಮುಖ ಬಡಾವಣೆಗಳ 198.31 ಎಕರೆ ಪ್ರದೇಶದ 279 ಸ್ಥಳಗಳಲ್ಲಿ ವಿವಿಧ ಸ್ವಯಂಸೇವಾ ಸಂಸ್ಥೆಗಳು, ಶಿಕ್ಷಣ ಸಂಸ್ಥೆಗಳು, ನಾಗರಿಕರು ಹಾಗೂ ಸಾವಿರಾರು ಸ್ವಯಂಸೇವಕರ ಸಹಭಾಗಿತ್ವದೊಂದಿಗೆ ನಡೆಸಲಾಗಿದೆ.

ಇಂತಹ ಬೃಹತ್ ಪ್ರಮಾಣದ ಯೋಜನೆಗಳ ಯಶಸ್ಸನ್ನು ಕೆಲವು ದಿನಗಳಲ್ಲಿ ಅಳೆಯುವುದು ವೈಜ್ಞಾನಿಕವಾಗಿ ಸಮಂಜಸವಲ್ಲ. ಹೊದಾಗಿ ಸ್ಥಳಾಂತರಿಸಲಾದ ಸಸಿಗಳ ಸಾಗಣೆ, ಮರುನೆಡುವಿಕೆ ಹಾಗೂ ಹವಾಮಾನಕ್ಕೆ ಹೊಂದಿಕೊಳ್ಳುವ ಪ್ರಕ್ರಿಯೆಯಿಂದಾಗಿ ಕೆಲಕಾಲ ಎಲೆಗಳು ಉದುರುವುದು ಸಹಜ. ಸಮರ್ಪಕ ನೀರು ಹಾಗೂ ಆರೈಕೆ ಬಳಿಕ ಅವು ಮತ್ತೆ ಚೇತರಿಸಿಕೊಳ್ಳುತ್ತವೆ ಎಂದು ಹೇಳಿದ್ದಾರೆ.

ಮೊದಲ ದಿನದಿಂದಲೇ ಬಿಡಿಎ ಹಾಗೂ ಪಾಲುದಾರ ಸ್ವಯಂಸೇವಾ ಸಂಸ್ಥೆಗಳು ಸಸಿಗಳ ರಕ್ಷಣೆ ಮತ್ತು ನಿರ್ವಹಣೆಯಲ್ಲಿ ತೊಡಗಿಕೊಂಡಿವೆ. ಎಲ್ಲ ಸ್ಥಳಗಳ ಮೇಲ್ವಿಚಾರಣೆ ನಡೆಯುತ್ತಿದ್ದು, ಸಮಸ್ಯೆ ಕಂಡುಬಂದಿರುವ ಕಡೆಗಳಲ್ಲಿ ತಕ್ಷಣವೇ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



ಬಿಡಿಎ ವತಿಯಿಂದ ಗಿಡಗಳಿಗೆ ತಾತ್ಕಾಲಿಕ ವ್ಯವಸ್ಥೆಯಲ್ಲಿ ನೀರು ಹಾಕಲಾಗುತ್ತಿದೆ

ಸಸಿಗಳನ್ನು ನೆಟ್ಟಿರುವ ಪ್ರದೇಶ ಗಳಲ್ಲಿ ಶಾಶ್ವತ ನೀರಾವರಿ ವ್ಯವಸ್ಥೆ ಮಾಡಲಾಗುತ್ತಿದೆ. ಮೂರು ಬಡಾವಣೆ ಗಳಲ್ಲಿ ಸುಮಾರು 40 ಕೊಳವೆಬಾವಿ ಗಳನ್ನು ಕೊರೆಯಲಾಗುತ್ತಿದೆ. ಅವುಗಳಿಗೆ ಸ್ಪಿಂಕ್ಲರ್ ನೀರಾವರಿ ವ್ಯವಸ್ಥೆ ಅಳವಡಿಸ ಲಾಗುತ್ತದೆ. ಎಲ್ಲಾ ಪಾಲುದಾರ ಎನ್‌ಜಿಒಗಳಿಗೆ 15 ದಿನಗಳೊಳಗೆ ಶಾಶ್ವತ ನೀರಾವರಿ ವ್ಯವಸ್ಥೆಯನ್ನು ಪೂರ್ಣಗೊಳಿ ಸುವಂತೆ ಸೂಚಿಸಲಾಗಿದೆ. ಶಾಶ್ವತ ವ್ಯವಸ್ಥೆ ಕಾರ್ಯಾರಂಭಗೊಳ್ಳುವವರೆಗೆ ಅಗತ್ಯವಿರುವ ಸ್ಥಳಗಳಿಗೆ ಟ್ಯಾಂಕರ್ ಮೂಲಕ ನೀರು ಪೂರೈಕೆ ಮಾಡಲಾಗುತ್ತಿದೆ. ಜಲ ಮಂಡಳಿಯ ಶುದ್ಧೀಕರಿಸಿದ ನೀರನ್ನು ಬಳಸುವ ಸಾಧ್ಯತೆಯನ್ನು ಪರಿಶೀಲಿಸಲಾ ಗುತ್ತಿದೆ ಎಂದು ಮಾಹಿತಿ ನೀಡಿದ್ದಾರೆ.

ಗಿಡ ನೆಡಲಾದ ಪ್ರದೇಶಗಳು

ಬಡಾವಣೆ	ವಿಸ್ತೀರ್ಣ (ಎಕರೆಗಳಲ್ಲಿ)	ಗಿಡ ನೆಟ್ಟ ಪ್ರದೇಶಗಳು
ಬನಶಂಕರಿ 6 ನೇ ಹಂತ ಬಡಾವಣೆ	16.68	29
ನಾಡಪ್ರಭು ಕೆಂಪೇಗೌಡ ಬಡಾವಣೆ	86.95	108
ಡಾ.ಶಿವರಾಮ ಕಾರಂತ ಬಡಾವಣೆ	94.68	142
ಒಟ್ಟು	198.31	279

ಶೇ 17ರಷ್ಟು ಸ್ಥಳಗಳಲ್ಲಿ ವಿಶೇಷ ಗಮನ

ಮೂರು ಬಡಾವಣೆಗಳ 279 ಸ್ಥಳಗಳಲ್ಲಿ ಗಿಡ ನೆಡಲಾಗಿದೆ. 231 ಪ್ರದೇಶಗಳಲ್ಲಿ ಗಿಡಗಳು ಸಾಮಾನ್ಯ ಸ್ಥಿತಿಯಲ್ಲಿದ್ದು (ಶೇ 20ಕ್ಕಿಂತ ಕಡಿಮೆ ಗಿಡಗಳು ಒಣಗಿರುವುದು), 48 ಸ್ಥಳಗಳಲ್ಲಿ ವಿಶೇಷ ಗಮನ ಬಹುಸುವ (ಶೇ 20ಕ್ಕಿಂತ ಹೆಚ್ಚು ಗಿಡಗಳು ಒಣಗಿದ ಸ್ಥಿತಿಯಲ್ಲಿದ್ದು) ಆಗತ್ಯವಿದೆ. ಇದರಲ್ಲಿ ಬನಶಂಕರಿ 6ನೇ ಹಂತ ಬಡಾವಣೆಯಲ್ಲಿ ಒಟ್ಟು 29 ಪ್ರದೇಶಗಳಲ್ಲಿಯೂ ಗಿಡಗಳು ಸಾಮಾನ್ಯ ಸ್ಥಿತಿಯಲ್ಲಿವೆ. ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ 108 ಪ್ರದೇಶಗಳಲ್ಲಿ 80 ಸ್ಥಳಗಳು ಸಾಮಾನ್ಯ ಸ್ಥಿತಿಯಲ್ಲಿದ್ದು, ಉಳಿದ 28 ಸ್ಥಳಗಳಲ್ಲಿ ವಿಶೇಷ ಗಮನ ಬಹುಸಲಾಗಿದೆ. ಡಾ. ಶಿವರಾಮ ಕಾರಂತ ಬಡಾವಣೆಯಲ್ಲಿ 142 ಸ್ಥಳಗಳಲ್ಲಿ 122 ಪ್ರದೇಶಗಳಲ್ಲಿ ಗಿಡಗಳು ಸಾಮಾನ್ಯ ಸ್ಥಿತಿಯಲ್ಲಿದ್ದು, 20 ಸ್ಥಳಗಳಲ್ಲಿ ವಿಶೇಷ ಗಮನ ಅಗತ್ಯವಾಗಿದೆ ಎಂದು ಬಿಡಿಎ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಯೋಜನೆಯ ಸಂಪೂರ್ಣ ಪಾರದರ್ಶಕತೆಗಾಗಿ ಪ್ರತಿಯೊಂದು ಗಿಡ ನೆಟ್ಟ ಪ್ರದೇಶವನ್ನು ವೀಪಲ್ಸ್ ಪ್ಲಾನೆಟ್ ವೇದಿಕೆಯಲ್ಲಿ ಜಿಯೋ-ಫೆನ್ಸಿಂಗ್ ಮಾಡಲಾಗುತ್ತದೆ. ಡ್ರೋಣ್ ಮೂಲಕ ಹಂತ ಹಂತವಾಗಿ ಬೆಳವಣಿಗೆಯ ದಾಖಲೆ ಮಾಡಲಾಗುತ್ತದೆ. ಪ್ರತಿ ವಾರ ಜಿಪಿಎಸ್ ಆಧಾರಿತ ಛಾಯಾಚಿತ್ರಗಳನ್ನು ಬಿಡಿಎ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುತ್ತದೆ. ಸಸಿಗಳ ನಿರ್ವಹಣೆಗೆ ಸಂಬಂಧಿಸಿದ ದೂರುಗಳನ್ನು ಸ್ವೀಕರಿಸಿ ತ್ವರಿತವಾಗಿ ಪರಿಹರಿಸಲು ವಿಶೇಷ ನಾಗರಿಕ ಸಹಾಯ ಕೇಂದ್ರ ಸ್ಥಾಪಿಸಲಾಗುತ್ತದೆ ಎಂದು ತಿಳಿಸಿದ್ದಾರೆ.

Prajavani Pg.03

ಕೃಷಿ ಡಿಪ್ಲೊಮಾಗೆ ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ



ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ (ಯುಎಎಸ್-ಬಿ) ಅಧೀನದಲ್ಲಿರುವ ಚಿಂತಾಮಣಿಯ ರೇಷ್ಮೆ ಕೃಷಿ ಮಹಾವಿದ್ಯಾಲಯದಲ್ಲಿ ನಡೆಸಲಾಗುವ ಎರಡು ವರ್ಷಗಳ ಡಿಪ್ಲೊಮಾ (ಕೃಷಿ) ಕೋರ್ಸ್‌ಗೆ 2026-27ನೇ ಶೈಕ್ಷಣಿಕ ಸಾಲಿಗೆ ಸೇರಲು ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವನ್ನು ಜು.21ರವರೆಗೆ ವಿಸ್ತರಿಸಲಾಗಿದೆ. ಹೆಚ್ಚಿನ ಮಾಹಿತಿಗೆ ಕುಲಸಚಿವರ ಕಚೇರಿ, ಕೃಷಿ ವಿಶ್ವವಿದ್ಯಾಲಯ, ಜಿಕೆವಿಕೆ, ಬೆಂಗಳೂರು-65 / ಡೀನ್ (ರೇಷ್ಮೆ ಕೃಷಿ), ರೇಷ್ಮೆ ಮಹಾವಿದ್ಯಾಲಯ, ಚಿಂತಾಮಣಿ ಅಥವಾ ವಿವಿಯ ವೆಬ್‌ಸೈಟ್ www.uasbangalore.edu.in ಸಂಪರ್ಕಿಬಹುದು ಎಂದು ವಿವಿ ತಿಳಿಸಿದೆ.

Vijaya Vani Pg.05c

ಕುಕ್ಕುಟೋದ್ಯಮಿಗಳಿಗೆ ಆದಾಯ ಗಳಿಕೆಯಲ್ಲಿ ಸಮಸ್ಯೆ

ದುಬಾರಿಯಾದ ವೆಚ್ಚ | ಇನ್ನೂ ಕೆಲವರು ಹಳೆಯ ದರವನ್ನೇ ನೀಡುತ್ತಿರುವುದರಿಂದ ತೊಂದರೆ

■ ಎಂ. ರಾಮೇಗೌಡ

ಸಂ.ಕ.ಸಮಾಚಾರ, ನಂದಗುಡಿ

ಕೋಳಿ ಸಾಕಾಣಿಕೆಗೆ ಬೇಕಾದ ಕಚ್ಚಾ ವಸ್ತುಗಳ ಬೆಲೆಗಳು ಏರಿಕೆ ಆಗಿರುವುದರಿಂದ ಕುಕ್ಕುಟೋದ್ಯಮ ದುಬಾರಿಯಾಗಿದೆ. ನೆಲ್‌ಹೊಟ್ಟು, ಇದ್ದಿಲು ಸೇರಿದಂತೆ ಇತರೆ ಅಗತ್ಯ ವಸ್ತುಗಳ ದರ ಏರಿಕೆಯಿಂದಾಗಿ ಆದಾಯ ಗಳಿಕೆಗೆ ಸಮಸ್ಯೆಯಾಗುತ್ತಿದೆ.

ಕೋಳಿ ಸಾಕಾಣಿಕೆದಾರರಿಗೆ ಕಚ್ಚಾವಸ್ತುಗಳ ಬೆಲೆ ಏರಿಕೆ ಸವಾಲಾಗಿ ಪರಿಣಮಿಸಿದೆ. ಖಾಸಗಿ ಕಂಪನಿಗಳಿಂದ ಮರಿಯನ್ನು ಖರೀದಿಸಿ ಸಾಕಾಣಿಕೆ ಮಾಡುವ ರೈತರಿಗೆ ನೆಲ್‌ಹೊಟ್ಟು ಇದ್ದಿಲು ಸೇರಿದಂತೆ ಅಗತ್ಯ ವಸ್ತುಗಳ ದರ ಏರಿಕೆಯಿಂದಾಗಿ ಆದಾಯಗಳಿಕೆಗೆ ಸಮಸ್ಯೆಯಾಗುತ್ತಿದೆ. ಜತೆಗೆ ಈ ಹಿಂದೆ ಸರಕಾರದ ಮಟ್ಟದಲ್ಲಿ ಕೈಗೊಂಡ ನಿರ್ಣಯದಂತೆ ಪ್ರತಿ ಕೋಳಿ ಮಾಂಸ ಉತ್ಪಾದನೆ ಕೆಜಿಗೆ 6.20 ರೂಪಾಯಿಯನ್ನು ಕೆಲ ಕಂಪನಿಗಳು ಮಾತ್ರ ರೈತರಿಗೆ ನೀಡುತ್ತಿದ್ದು, ಕೆಲವು ಹಳೆಯ ದರವನ್ನೇ ನೀಡುತ್ತಿದ್ದಾರೆ. ಇದು ಕೋಳಿ ಸಾಕಾಣಿಕೆದಾರರಿಗೆ ಗಾಯದ ಮೇಲೆ ಬರೆ ಎಳೆದಾಗಿದೆ.



ಎಲ್ಲವೂ ದುಬಾರಿ: ಕೋಳಿ ಸಾಕಾಣಿಕೆ ಮೊದಲಿನಷ್ಟು ಅಗ್ಗವಾಗಿ ಉಳಿದಿಲ್ಲ. ಕೋಳಿ ಉತ್ಪಾದನೆಗೆ ಅಗತ್ಯವಾದ ಕಚ್ಚಾವಸ್ತುಗಳು ಬೆಲೆ ಗಗನಕ್ಕೆರಿದಿವೆ. ಈ ಹಿಂದೆ 1 ಟನ್ ನೆಲ್‌ಹೊಟ್ಟು ಬೆಲೆ 6500ರಿಂದ 9000 ರೂ.ಗೆ ಏರಿಕೆಯಾಗಿದೆ. ಜತೆಗೆ ಕೋಳಿಗಳಿಗೆ ಶಾಖ ನೀಡಲು ಬಳಸುವ ಇದ್ದಿಲು ದರ ಪ್ರತಿ ಟನ್‌ಗೆ 11 ಸಾವಿರದಿಂದ 25 ಸಾವಿರ ರೂ.ಗೆ ಏರಿಕೆ ಕಂಡಿದ್ದು, ಜತೆಗೆ ಕೋಳಿ ಆಹಾರಗಳ ಬೆಲೆ ಸದ್ದಿಕ್ಕಿ ಸ್ಥಿರತೆ ಕಾಯ್ಕಕೊಂಡಿದ್ದರು. ಮುಂದಿನ ದಿನಗಳಲ್ಲಿ ಮತ್ತಷ್ಟು ದುಬಾರಿಯಾಗುವ ಸಾಧ್ಯತೆ ಹೆಚ್ಚಿದೆ.

ಕೋಳಿ ಸಾಕಾಣಿಕೆದಾರರು ಖಾಸಗಿ ಕಂಪನಿಗಳಿಂದ 40 ಗ್ರಾಂ ತೂಕದ ಮರಿಗಳನ್ನು ಪಡೆದು ಅದನ್ನು ಸಾಕಾಣಿಕೆ ಮಾಡಲಾಗುತ್ತದೆ. ಈ ಸಾಕಾಣಿಕೆದಾರರಿಗೆ ಪ್ರತಿ ಕೆಜಿಗೆ 6.20ರೂ ಸಾಕಾಣಿಕೆ ವೆಚ್ಚ ನೀಡಬೇಕಾಗಿದೆ.

ಆದರೆ ಕೆಲವು ಕಂಪನಿಗಳು ಪ್ರಸ್ತುತ ಎರಡರಿಂದ ಮೂರು ರೂಪಾಯಿ ಮನ ಬಂದಂತೆ ನೀಡುತ್ತಿದೆ, ಸರ್ಕಾರ ಇನ್ನೂ ಕೋಳಿ ಸಾಕಾಣಿಕೆಯನ್ನು ಕೃಷಿಯೆಂದು ಪರಿಗಣಿಸಿಲ್ಲ. ಹಾಗೂ ವಿಮೆ ಸೌಲಭ್ಯಗಳನ್ನು ನೀಡಿಲ್ಲ ಮಳೆಯಿಂದ ಶೆಡ್‌ಗಳಿಗೆ ಹಾನಿಯಾಗಿದ್ದು ಅಂತಹ ರೈತರಿಗೆ ಪರಿಹಾರ ಇದುವರೆಗೂ ನೀಡಿಲ್ಲ ಖಾಸಗಿ ಕಂಪನಿಗಳು ವರ್ಷಕ್ಕೆ 5 ಬ್ಯಾಚ್‌ಗಳ ಬದಲು 3ರಿಂದ 4 ಬ್ಯಾಚ್‌ಗಳಲ್ಲಿ ಮಾತ್ರ ಮರಿಗಳ ಪೂರೈಕೆ ಮಾಡುತ್ತಾರೆ. ರೈತರು ಒಮ್ಮೊಮ್ಮೆ ಹಕ್ಕಿ ಜ್ವರಭೀತಿಯಿಂದ ಆತಂಕ ಎದುರಾಗುತ್ತದೆ.

ಕೋಳಿ ಉತ್ಪಾದನೆ ದೊಡ್ಡ ಉದ್ಯಮವಾಗಿ ಬೆಳೆಯುತ್ತಿದೆ. ಉತ್ಪಾದನಾ ವೆಚ್ಚ ಹೆಚ್ಚಳವಾಗುತ್ತಿದೆ. ಕೆಲ ಕಂಪನಿಗಳು ಸಾಕಾಣಿಕೆದಾರರಿಗೆ ನಿಗದಿಪಡಿಸಲಾದ ಉತ್ಪಾದನಾ ವೆಚ್ಚ ನೀಡದೆ ವಂಚಿಸುತ್ತಿದೆ. ಈ ಸಂಬಂಧ ಸರಕಾರ ಕ್ರಮವಹಿಸಬೇಕು. ಇಲ್ಲವಾದಲ್ಲಿ ತಾಲೂಕು ಜಿಲ್ಲಾ ಮತ್ತು ಕರ್ನಾಟಕದಾದ್ಯಂತ ಪ್ರತಿಭಟನೆ ಹಮ್ಮಿಕೊಳ್ಳಲಾಗುತ್ತದೆ.

ರಾಮಗೋವಿಂದವೂರ ಕೋಳಿ ಸಾಕಾಣಿಕೆದಾರ ಗಣೇಶಪ್ಪ ಮಾತನಾಡಿ, ಹೈಮುಗಾರಿಕೆಯಲ್ಲಿ ರೈತರು ಕೋಳಿ ಸಾಕಾಣಿಕೆ ಪ್ರಮುಖ ಕಸಬುಗಿದೆ ಸುಮಾರು 35 ವರ್ಷಗಳಿಂದ ಕೋಳಿ ಶೆಡ್ಡಿಗೆ ಲಕ್ಷಾಂತರ ರೂಪಾಯಿ ಬಂಡವಾಳ ಹೂಡಿ ಖಾಸಗಿ ಕಂಪನಿಗಳ ಒಪ್ಪಂದ ಮಾಡಿ ಕೋಳಿ ಸಾಕಾಣಿಕೆ ಮಾಡುತ್ತಿದ್ದೇವೆ 2021ರಲ್ಲಿ6.20. ಸರ್ಕಾರ ಆದೇಶದ ಮೇರೆಗೆ ಕಂಪನಿಗಳು ನೀಡುತ್ತಿದೆ ಆದರೆ ನೀಡುತ್ತಿರುವ ಮೊತ್ತ ಸಾಕಾಗುವುದಿಲ್ಲ ಕೆಲವು ತಿಂಗಳಿಂದ ಸರ್ಕಾರ ಆದೇಶ ಮಾಡಿಸಿರುವ 10.ರೂ. ನೀಡಿದರೆ ಅನುಕೂಲವಾಗುತ್ತದೆ ಎಂದರು.

Samyuktha Kar. Pg.04

15 ಲಕ್ಷ ಸಸಿಗಳಿಗೆ ಸ್ಪಿಂಕ್ಲರ್ ನೀರಾವರಿ: ಬಿಡಿಎ

ಗಿಡ ದತ್ತು ಪಡೆಯಲು ಸಾರ್ವಜನಿಕರಿಗೆ ಅವಕಾಶ | ಎನ್‌ಜಿಒಗಳ ಮೂಲಕ ನಿರ್ವಹಣೆ

■ ಉದಯವಾಣಿ ಸಮಾಚಾರ

ಬೆಂಗಳೂರು: ವೈಜ್ಞಾನಿಕ ನಿರ್ವಹಣೆ, ಪಾರದರ್ಶಕ ಮೇಲ್ವಿಚಾರಣೆ ಹಾಗೂ ಜನಸಹಭಾಗಿತ್ವದ ಮೂಲಕ ಇತ್ತೀಚೆಗೆ ನೆಟ್ಟಿರುವ 15 ಲಕ್ಷ ಸಸಿಗಳ ದೀರ್ಘಕಾಲೀನ ಉಳಿವಿಗೆ ಆದ್ಯತೆ ನೀಡಲಾಗಿದೆ ಎಂದು ಬಿಡಿಎ ತಿಳಿಸಿದೆ.

ಈ ಕುರಿತು ಪ್ರಕಟಣೆ ಹೊರಡಿಸಿರುವ ಬಿಡಿಎ, ಮೊದಲ ದಿನದಿಂದಲೇ ಬಿಡಿಎ ಹಾಗೂ ಪಾಲುದಾರ ಸ್ವಯಂಸೇವಾ ಸಂಸ್ಥೆಗಳು ಸಸಿಗಳ ರಕ್ಷಣೆ ಮತ್ತು ನಿರ್ವಹಣೆಯಲ್ಲಿ ನಿರಂತರವಾಗಿ ತೊಡಗಿಕೊಂಡಿವೆ. ಈಗಾಗಲೇ ಎಲ್ಲ ಸ್ಥಳಗಳ ಮೇಲ್ವಿಚಾರಣೆ ನಡೆಯುತ್ತಿದ್ದು, ಸಮಸ್ಯೆ ಕಂಡುಬಂದಿರುವ ಕಡೆಗಳಲ್ಲಿ ತಕ್ಷಣವೇ ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ಸಮಗ್ರ ಸ್ಥಳ ಪರಿಶೀಲನೆ ಪೂರ್ಣಗೊಂಡಿದೆ. 3 ಬಡಾವಣೆಗಳ 198 ಎಕರೆ ವ್ಯಾಪ್ತಿಯ ಎಲ್ಲಾ 279 ನೆಡುವಿಕೆ ಸ್ಥಳಗಳ ಪರಿಶೀಲನೆಯನ್ನು ಬಿಡಿಎ ಪೂರ್ಣಗೊಳಿಸಿದೆ. ಪ್ರತಿ ಸ್ಥಳದ ಪ್ರಸ್ತುತ ಸ್ಥಿತಿಯನ್ನು ಆಧರಿಸಿ ವೈಜ್ಞಾನಿಕ



ಮೇಲ್ವಿಚಾರಣೆ ಹಾಗೂ ಅಗತ್ಯ ಕ್ರಮಗಳಿಗಾಗಿ ವರ್ಗೀಕರಣ ಮಾಡಲಾಗಿದೆ. ಗಿಡಗಳನ್ನು ನೆಟ್ಟ ಪ್ರದೇಶಗಳನ್ನು ದತ್ತು ಪಡೆಯಲು ಅವಕಾಶ ಕಲ್ಪಿಸಲಾಗುತ್ತಿದೆ ಎಂದು ತಿಳಿಸಿದೆ.

ತಕ್ಷಣದ ನಿರ್ವಹಣೆ ಅಗತ್ಯವಿರುವ ಸ್ಥಳಗಳನ್ನು ಗುರುತಿಸಲಾಗಿದ್ದು, ಅವುಗಳಿಗೆ ವಿಶೇಷ ಮೇಲ್ವಿಚಾರಣೆ ಹಾಗೂ ತ್ವರಿತ ನಿರ್ವಹಣೆ ಆರಂಭಿಸಲಾಗಿದೆ. ಎಲ್ಲಾ ನೆಡುವಿಕೆ ಪ್ರದೇಶಗಳಲ್ಲಿ ಶಾಶ್ವತ ನೀರಾವರಿ ವ್ಯವಸ್ಥೆ ನಿರ್ಮಿಸಲಾಗುತ್ತಿದೆ. 3 ಬಡಾವಣೆಗಳಲ್ಲಿ ಸುಮಾರು 40 ಕೊಳವೆಬಾವಿಗಳನ್ನು ನಿರ್ಮಿಸಲಾಗುತ್ತಿದೆ. ಅವುಗಳಿಗೆ ಸ್ಪಿಂಕ್ಲರ್ ನೀರಾವರಿ ವ್ಯವಸ್ಥೆ ಅಳವಡಿಸಲಾಗುತ್ತದೆ. ಎಲ್ಲಾ ಪಾಲುದಾರ ಎನ್‌ಜಿಒಗಳು 15 ದಿನಗಳೊಳಗೆ ಶಾಶ್ವತ ನೀರಾವರಿ ವ್ಯವಸ್ಥೆಯನ್ನು ಪೂರ್ಣಗೊಳಿಸುವಂತೆ ಸೂಚಿಸಲಾಗಿದೆ. ಶಾಶ್ವತ ವ್ಯವಸ್ಥೆ ಕಾರ್ಯಾರಂಭಿಸುವವರೆಗೆ ಅಗತ್ಯವಿರುವ ಸ್ಥಳಗಳಿಗೆ ಟ್ಯಾಂಕರ್ ಮೂಲಕ ನೀರು ಪೂರೈಕೆ ಮಾಡಲಾಗುತ್ತಿದೆ. ಜಲಮಂಡಳಿಯ ಶುದ್ಧೀಕರಿಸಿದ ನೀರನ್ನು ಬಳಸಲಾಗುವುದು. ಕೆಲವು ಸಸಿಗಳು ಮರು ನೆಡುವಿಕೆಯ ಒತ್ತಡದಿಂದ ತಾತ್ಕಾಲಿಕವಾಗಿ ಎಲೆಗಳನ್ನು ಕಳೆದುಕೊಂಡಿವೆ. ಇವುಗಳನ್ನು ತಕ್ಷಣವೇ ಒಣಗಿವೆ ಎಂದು ಪರಿಗಣಿಸಲಾಗುವುದಿಲ್ಲ. ಒಂದು ತಿಂಗಳ ಕಾಲ ನಿರಂತರ ನೀರುಣಿಕೆ ಮತ್ತು ಮೇಲ್ವಿಚಾರಣೆ ನಡೆಸಿದ ಬಳಿಕವೂ ಚೇತರಿಸಿಕೊಳ್ಳದ ಸಸಿಗಳನ್ನು ಮಾತ್ರ ಒಣಗಿದ ಸಸಿಗಳೆಂದು ಪರಿಗಣಿಸಲಾಗುತ್ತದೆ. ಪರಿಶೀಲನೆಯ ನಂತರ ಒಣಗಿರುವುದು ದೃಢಪಟ್ಟ ಸಸಿಗಳನ್ನು ಸಂಬಂಧಿಸಿದ ಎನ್‌ಜಿಒಗಳ ಮೂಲಕ ಮರು ನೆಡಲಾಗುತ್ತದೆ ಎಂದು ಬಿಡಿಎ ತಿಳಿಸಿದೆ.

Udaya Vani Pg.03

ಹಲವು ತಿಂಗಳಿಂದ ಇಳಿಕೆಯಾಗಿದ್ದ ಈರುಳ್ಳಿ ದರ ಏರುಗತಿಯತ್ತ | ಗ್ರಾಹಕರಿಗೆ ಬೆಲೆ ಏರಿಕೆ ಬಿಸಿ ತಟ್ಟುವ ಸಾಧ್ಯತೆ

ಅತಿವೃಷ್ಟಿ, ಅನಾವೃಷ್ಟಿಯಿಂದ ಈರುಳ್ಳಿಗೆ ಆಪತ್ತು

■ ವಿಕ ಸುದ್ದಿಲೋಕ ಬೆಂಗಳೂರು

ದೇಶದ ಕೆಲವೆಡೆ ಅತಿವೃಷ್ಟಿಯಾದರೆ, ಇನ್ನೂ ಕೆಲವೆಡೆ ಅನಾವೃಷ್ಟಿಯಿಂದ ಜನ ತತ್ತರಿಸಿದ್ದಾರೆ. ಇದರ ಮಧ್ಯೆ ಕೃಷಿ ಮತ್ತು ತೋಟಗಾರಿಕೆ ಬೆಳೆಗಳು ತತ್ತರಿಸಿವೆ. ಇದರ ಪರಿಣಾಮ ಈರುಳ್ಳಿ ಬೆಳೆ ಮೇಲೆ ಬೀಳುತ್ತಿದ್ದು, ಮುಂದಿನ ದಿನಗಳಲ್ಲಿ ಗ್ರಾಹಕರಿಗೆ ಬೆಲೆ ಏರಿಕೆಯ ಬಿಸಿ ತಟ್ಟುವ ಸಾಧ್ಯತೆಯಿದೆ.

ದೇಶದಲ್ಲಿ ಅತಿ ಹೆಚ್ಚು ಈರುಳ್ಳಿ ಬೆಳೆಯುವ ರಾಜ್ಯ ಮಹಾರಾಷ್ಟ್ರ ಕಳೆದ ಕೆಲವು ದಿನಗಳಿಂದ ಅಲ್ಪ ಭಾರೀ ಪ್ರಮಾಣದಲ್ಲಿ ಮಳೆಯಾಗುತ್ತಿದ್ದು, ಜನಜೀವನ ಅಸ್ತವ್ಯಸ್ತಗೊಂಡಿದೆ. ಇದರ ಮಧ್ಯೆ ಈರುಳ್ಳಿ ಬೆಳೆಗೆ ದೊಡ್ಡ ಹೊಡೆತ ಬಿದ್ದಿದೆ. ಮಹಾರಾಷ್ಟ್ರದಲ್ಲಿ ಬೇಸಿಗೆಯಲ್ಲಿ ಬೆಳೆದಿರುವ ಈರುಳ್ಳಿಯನ್ನು ಸಂಗ್ರಹಿಸಿಡಲಾಗಿದೆ. ವಾತಾವರಣದ ಏರುಪೇರಿನಿಂದಾಗಿ ಆ ಈರುಳ್ಳಿ ಮೇಲೆ ಕವ್ವ ಮಳೆ ಮೂಡುತ್ತಿದೆ. ಆದರೆ, ಕರ್ನಾಟಕದಲ್ಲಿ ಈಗಾಗಲೇ ಬಿತ್ತನೆಯಾಗಿದೆ. ಬರಗಾಲವಿರುವುದರಿಂದ ಕಡಿಮೆ ಪ್ರಮಾಣದಲ್ಲಿ ಬಿತ್ತನೆಯಾಗಿದೆ. ಹೀಗಾಗಿ, ಮುಂದಿನ ದಿನಗಳಲ್ಲಿ ಬೆಲೆಗಳು ಏರಿಕೆಯಾಗುವ ಸಂಭವವಿದೆ.

ಸುಮಾರು ಆರೇಳು ತಿಂಗಳಿಂದ ನಿರಂತರವಾಗಿ ಈರುಳ್ಳಿ ದರ ಇಳಮುಖವಾಗಿಯೇ ಸಾಗುತ್ತಿತ್ತು. ಕೆ.ಜಿ.ಗೆ 15-20 ರೂ. ಮಿತಿಯಲ್ಲಿತ್ತು. ಇದೀಗ 30 ರೂ.ಗೆ ಏರಿಕೆಯಾಗಿದೆ. ಸೆಪ್ಟೆಂಬರ್-ಅಕ್ಟೋಬರ್‌ನಲ್ಲಿ ಹೊಸ ಬೆಳೆ ಬರಲಿದ್ದು, ಈ ಬೆಳೆಯ ಮೇಲೆ ಹೆಚ್ಚು



ಪರಿಣಾಮ ಬೀರಲಿದ್ದು, ಆಗ ಬೆಲೆಗಳು ಮತ್ತಷ್ಟು ಹೆಚ್ಚುವ ಸಾಧ್ಯತೆಯಿದೆ ಎಂದು ಎಪಿಎಂಸಿ ವ್ಯಾಪಾರಿಗಳು ಹೇಳುತ್ತಿದ್ದಾರೆ.

ಯಶವಂತಪುರ ಎಪಿಎಂಸಿಯಲ್ಲಿ ಉತ್ತಮ ಗುಣಮಟ್ಟದ ಈರುಳ್ಳಿ ಕೆ.ಜಿ.ಗೆ 30-32 ರೂ. ಇದ್ದರೆ, ಸಾಧಾರಣ ಈರುಳ್ಳಿ ಕೆ.ಜಿ.ಗೆ 23-25 ರೂ. ಇತ್ತು. ಈರುಳ್ಳಿ ನಾಟಿ ಮಾಡಿದರೆ 3 ರಿಂದ 4 ತಿಂಗಳಿಗೆ ಕಟಾವಿಗೆ ಬರುತ್ತದೆ. ನೀರಾವರಿ ವ್ಯವಸ್ಥೆಯುಳ್ಳವರು ವರ್ಷದಲ್ಲಿ ಎರಡು ತೆಗೆದು ಮಧ್ಯದಲ್ಲಿ ಮತ್ತೊಂದು ಬೆಳೆಯನ್ನೂ ತೆಗೆದುಕೊಳ್ಳಬಹುದು. ಹೀಗಾಗಿ, ಈ ಬಾರಿ ಹೆಚ್ಚಿನವರು ಈರುಳ್ಳಿ ಬೆಳೆದಿದ್ದರು. ಅದರಲ್ಲೂ, ವಿಜಯಪುರ, ಗದಗ, ಚಿತ್ರದುರ್ಗ ಮತ್ತಿತರ ಜಿಲ್ಲೆಗಳಲ್ಲಿ ಈರುಳ್ಳಿಗೆ ಮಳೆಯಿಲ್ಲದೆ ತೊಂದರೆಯಾಗಿದೆ.

ಈರುಳ್ಳಿ ದರ ಎಲ್ಲೆಲ್ಲಿ ಎಷ್ಟು (ಕೆ.ಜಿ.ಗಳಲ್ಲಿ)

ಯಶವಂತಪುರ ಎಪಿಎಂಸಿ

ಉತ್ತಮ	30-32
ಮಧ್ಯಮ	23-25
ಚಿಲ್ಲರೆ ದರ	30-35
ಹಾಪ್‌ಕಾಮ್ಸ್	35-40

ಬೇಡಿಕೆ ಹೆಚ್ಚು

ಮಹಾರಾಷ್ಟ್ರದ ದಕ್ಷ ಈರುಳ್ಳಿಗೆ ದೇಶದಲ್ಲಿ ಅತಿ ಹೆಚ್ಚು ಬೇಡಿಕೆಯಿದೆ. ಮಾರ್ಚ್‌ನಿಂದ ಅಕ್ಟೋಬರ್‌ವರೆಗೆ ಮಹಾರಾಷ್ಟ್ರದ ಈರುಳ್ಳಿಯನ್ನೇ ಬಳಸಲಾಗುತ್ತದೆ. ಉಳಂದತೆ ಕರ್ನಾಟಕ, ಗುಜರಾತ್, ಆಂಧ್ರಪ್ರದೇಶ, ರಾಜಸ್ಥಾನ, ಮಧ್ಯಪ್ರದೇಶದಲ್ಲಿ ಬೆಳೆಯುವ ಈರುಳ್ಳಿಯನ್ನು ಆಯಾ ಭಾಗಗಳಲ್ಲಿ ಬಳಸಲಾಗುತ್ತದೆ. ಉಳಂದತೆ ಬಳ್ಳಾರಿ ರೆಡ್, ರೋಜ್ ಆನಿಯನ್, ಎನ್.ಹೆಚ್.53, ಆರ್ಕಾ ನಿಕೇತನ್, ಕಲ್ಯಾಣ್, ಪ್ರಗತಿ ಇತ್ಯಾದಿ ತಳಗಳಿವೆ.



ಇತರೆ ರಾಜ್ಯಗಳ ಮೇಲೆ ಅವಲಂಬನೆ

ಮಹಾರಾಷ್ಟ್ರದಲ್ಲಿ ಈಗ ಬೆಳೆಯಲ್ಲು, ಬೆಲೆಗೆಯಲ್ಲಿ, ಬೆಳೆದಿರುವ ಬೆಳೆ ದಾಸ್ತಾನು ಮಾಡಲಾಗಿದೆ. ಆದರೆ, ಕರ್ನಾಟಕದಲ್ಲಿ ಚಳಿಕೆಯಿಂದ ಬೆಳಗಾವಿವರೆಗೆ ಮೇ-ಜೂನ್‌ನಲ್ಲಿ ಬಿತ್ತನೆ ಮಾಡಿರುತ್ತಾರೆ. ಇದು ಆಗಸ್ಟ್-ಸೆಪ್ಟೆಂಬರ್‌ಗೆ ಕೊಯ್ಲಿಗೆ ಬರುತ್ತದೆ. ಆದರೆ, ಈ ಬಾರಿ ಬರಗಾಲ ಇರುವುದರಿಂದ ಬಿತ್ತನೆ ಕಡಿಮೆ ಮಾಡಿದ್ದಾರೆ. ಜತೆಗೆ, ತಡವಾಗಿದೆ. ಹೀಗಾಗಿ, ಆಕ್ಟೋಬರ್‌ಗೆ ಬೆಳೆ ಬಂದರೂ ಹೆಚ್ಚಿನ ಪ್ರಮಾಣದಲ್ಲಿ ಇಳುವರಿ ಇರುವುದಿಲ್ಲ. ಅಲ್ಲದೆ, ಮಹಾರಾಷ್ಟ್ರದ ರೈತರು ಬೇಸಿಗೆಯಲ್ಲಿ ಬೆಳೆದಿರುವ ಬೆಳೆಯನ್ನು ಸಂಗ್ರಹಿಸಿಟ್ಟುಕೊಂಡಿದ್ದು, ಕರ್ನಾಟಕದ ಬೆಳೆ ನೋಡಿಕೊಂಡು ಬೆಲೆ ಹೆಚ್ಚಾದಾಗ ಇಲ್ಲಿಗೆ ಪೂರೈಕೆ ಮಾಡುತ್ತಾರೆ. ನಮ್ಮಲ್ಲಿ ಈರುಳ್ಳಿ ಬೆಳೆ ಕಡಿಮೆಯಿರುವುದರಿಂದ ಮಧ್ಯಪ್ರದೇಶ, ಮಹಾರಾಷ್ಟ್ರ ಸೇರಿದಂತೆ ಭಾರತದ ಇತರೆ ರಾಜ್ಯಗಳ ಈರುಳ್ಳಿಯ ಮೇಲೆ ನಾವು ಅವಲಂಬಿತರಾಗಬೇಕಾಗುತ್ತದೆ. ಹೀಗಾಗಿ, ರಾಜ್ಯದಲ್ಲಿ ಈರುಳ್ಳಿ ದರ ಹೆಚ್ಚಾಗುವ ಸಾಧ್ಯತೆಯಿದೆ ಎಂದು ಯಶವಂತಪುರ ಎಪಿಎಂಸಿ ಈರುಳ್ಳಿ ಆಲೂಗಡ್ಡೆ ಮತ್ತು ಬೆಳ್ಳುಳ್ಳಿ ವರ್ತಕರ ಸಂಘದ ಕಾರ್ಯದರ್ಶಿ ಬಿ. ರವಿಶಂಕರ್ ತಿಳಿಸಿದರು.

Vijaya Kar. Pg.10

UAS Dharwad's 'DWR 162' wheat seed to bolster food security in Indonesia

SHRINIDHI R
DHARWAD, DHNS

The University of Agricultural Sciences (UAS), Dharwad, has earned another distinction with its high-yielding and superior-quality wheat variety, DWR 162, set to be exported to Indonesia as part of an initiative to strengthen regional food security and agricultural cooperation.

The Indian government will supply 100 tonnes of DWR 162 wheat seed, developed by UAS, Dharwad, to Indonesia. The initiative was announced by Prime Minister Narendra Modi during his recent visit to Indonesia and formalised through a Memorandum of Understanding (MoU) signed between the two countries.

Speaking to *DH*, UAS Dharwad Vice Chancellor (acting) M V Manjunath said the university's wheat improvement programme was initiated under the leadership of noted wheat breeder Dr R R Hanchinal. Using the shuttle breeding approach, the programme successfully developed the bread wheat variety DWR 162, which was subsequently released and notified by the Government of India for cultivation in the peninsular region.

DWR 162 combines resistance to the prevailing races of leaf and stem rust with high yield potential, superior grain quality and excellent tolerance to heat stress throughout the crop cycle. These traits have enabled the variety to perform consistently under the warm climatic conditions of peninsular India.

"DWR 162 continues to be one of the most preferred wheat varieties in the region and consistently receives among the highest breeder seed indents," Prof Manjunath said.

As part of its efforts to strengthen food security, Indonesia had imported several wheat varieties developed by Indian institutions and the International Maize and Wheat Improvement Centre for adaptability testing. During these evaluations, the DWR 162 significantly outperformed the other varieties.

The initiative marks a significant milestone in the long-standing agricultural partnership between India and Indonesia and reflects their shared commitment to building resilient, sustainable and climate-adaptive agricultural systems while contributing to regional food security, Prof Manjunath added.



The superior-quality wheat variety DWR 162. DH PHOTO

Deccan Herald Pg.04

ನಾಳೆಯಿಂದ ಸಸ್ಯ ಸಂತೆ

ಬೆಂಗಳೂರು: ಬೆಂಗಳೂರಿನ ಪ್ರಾದೇಶಿಕ ತೋಟಗಾರಿಕೆ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ ಹಾಗೂ ತೋಟಗಾರಿಕೆ ಮಹಾವಿದ್ಯಾಲಯದ ಆಶ್ರಯದಲ್ಲಿ ಜು.10 ರಿಂದ 12ರವರೆಗೆ ನಗರದ ಜಿಕೆವಿಕೆ ಆವರಣದಲ್ಲಿ ಮೂರು ದಿನಗಳ ಕಾಲ 'ಸಸ್ಯ ಸಂತೆ' ಆಯೋಜಿಸಲಾಗಿದೆ.

ಬೆಂಗಳೂರು ಗ್ರಾಮಾಂತರ ಸಂಸದ ಡಾ. ಸಿ.ಎನ್. ಮಂಜುನಾಥ್ ಸಸ್ಯ ಸಂತೆಯನ್ನು ಉದ್ಘಾಟಿಸಲಿದ್ದಾರೆ. ಶಾಸಕ ಎಸ್.ಆರ್. ವಿಶ್ವನಾಥ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ.

ಸಂತೆಯಲ್ಲಿ ಜಾನಪದ ನೃತ್ಯ, ಮೆರವಣಿಗೆ, ಜಾನಪದ ಗಾಯನ ಹಾಗೂ ಭರತನಾಟ್ಯ ಪ್ರದರ್ಶನಗಳು ವಿಶೇಷ ಆಕರ್ಷಣೆಯಾಗಿರಲಿವೆ. ಗ್ರಾಹಕರಿಗೆ ನೇರವಾಗಿ ಮಾರಾಟ ಮಾಡಲು 150ಕ್ಕೂ ಅಧಿಕ ಮಳಿಗೆಗಳ ವ್ಯವಸ್ಥೆ ಮಾಡಲಾಗಿದೆ. ಸಂತೆಯಲ್ಲಿ ಹಣ್ಣಿನ ಗಿಡಗಳು, ಹೂವು ಮತ್ತು ಅಲಂಕಾರಿಕ ಸಸ್ಯಗಳು, ಪ್ಲಾಂಟೇಶನ್, ಔಷಧ ಹಾಗೂ ಸುಗಂಧ ಸಸ್ಯಗಳು ದೊರೆಯಲಿವೆ. ಎರೆಹುಳು ಗೊಬ್ಬರ, ಹೂಕುಂಡದ ಮಣ್ಣು ಮಿಶ್ರಣ, ಜೈವಿಕ ಪೀಡೆನಾಶಕಗಳು, ಬೀಜಗಳು, ಗಾರ್ಡನ್ ಪರಿಕರಗಳು, ಸಿರಿಧಾನ್ಯಗಳು, ಮೌಲ್ಯವರ್ಧಿತ ಪದಾರ್ಥಗಳು ಮತ್ತು ತರಕಾರಿ-ಹೂವಿನ ಬೀಜಗಳು ಇಲ್ಲಿ ಲಭ್ಯವಿರಲಿವೆ.

ಶಾಲಾ-ಕಾಲೇಜು ವಿದ್ಯಾರ್ಥಿಗಳು ಮತ್ತು ಕೃಷಿ ಆಸಕ್ತರಿಗೆ ಅನುಕೂಲವಾಗುವಂತೆ 'ಕೃಷಿ ಶಿಕ್ಷಣ' ಮತ್ತು 'ಬೆಳೆ ಸಂಗ್ರಹಾಲಯ'ವನ್ನು ವಿಶೇಷ ಆಕರ್ಷಣೆಯಾಗಿ ರೂಪಿಸಲಾಗಿದೆ. ಸಾರ್ವಜನಿಕರು ಇದರ ಸದುಪಯೋಗಪಡಿಸಿಕೊಳ್ಳುವಂತೆ ಪ್ರಾದೇಶಿಕ ತೋಟಗಾರಿಕೆ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದ ಸಹ ಸಂಶೋಧನಾ ಮತ್ತು ವಿಸ್ತರಣಾ ನಿರ್ದೇಶಕ ಹಾಗೂ ಬೆಂಗಳೂರು ತೋಟಗಾರಿಕೆ ಮಹಾವಿದ್ಯಾಲಯದ ಡೀನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Vijaya Kar. Pg.10

ತೋಟಗಾರಿಕೆ ಕಾಲೇಜಿನಿಂದ 'ಸಸ್ಯ ಸಂತೆ'

ಬೆಂಗಳೂರು: ಪ್ರಾದೇಶಿಕ ತೋಟಗಾರಿಕೆ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ ಹಾಗೂ ತೋಟಗಾರಿಕೆ ಮಹಾವಿದ್ಯಾಲಯ ಸಹಯೋಗದಲ್ಲಿ 10ರಿಂದ 12ರವರೆಗೆ ನಗರದ ಜಿಕೆವಿಕೆ ಆವರಣದಲ್ಲಿ 'ಸಸ್ಯ ಸಂತೆ' ಆಯೋಜಿಸಲಾಗಿದೆ. ಸಂಸದ ಡಾ. ಸಿ.ಎನ್. ಮಂಜುನಾಥ್ ಉದ್ಘಾಟಿಸಲಿದ್ದಾರೆ. ಶಾಸಕ ಎಸ್.ಆರ್. ವಿಶ್ವನಾಥ್ ಅಧ್ಯಕ್ಷತೆ ವಹಿಸಲಿದ್ದು, ವಿವಿಯಸಂಶೋಧನಾ ನಿರ್ದೇಶಕ ಡಾ. ಬಿ. ಫಕ್ರುದೀನ್ ಮತ್ತು ವಿಸ್ತರಣಾ ನಿರ್ದೇಶಕ ಡಾ. ವೆಂಕಟೇಶಲು ಇತರರು ಭಾಗವಹಿಸಲಿದ್ದಾರೆ. ಗ್ರಾಹಕರಿಗೆ ನೇರವಾಗಿ ಮಾರಾಟ ಮಾಡಲು 150ಕ್ಕೂ ಅಧಿಕ ಮಳಿಗೆಗಳ ವ್ಯವಸ್ಥೆ ಮಾಡಲಾಗಿದೆ. ಹಣ್ಣಿನ ಗಿಡಗಳು, ಹೂವು ಮತ್ತು ಅಲಂಕಾರಿಕ ಸಸ್ಯಗಳು, ಪ್ಲಾಂಟೇಶನ್, ಔಷಧೀಯ ಹಾಗೂ ಸುಗಂಧಿತ ಸಸ್ಯಗಳು ದೊರೆಯಲಿವೆ.

Vijaya Vani Pg.05a